ಪಾಡಿ ತಪ್ಪಿಸಿಕೊಂಡ ಡೆಲಿಕೇಟ್ ಸೊಳ್ಳೆಗಳಿಗೆ ಡೆಡಿಕೇಟ್ ಮಾಡಿದೆ. 'ಓಡ್ ಟು ಎ ನೈಟಿಂಗೇಲ್'ನ ಹಾಗೆ 'ಓಡ್ ಟು ಎ ಮಸ್ಕಿಟೋ' ಇದೆಯಂತೆ. ಇಬ್ಬರೂ ಸುಶ್ರಾವ್ಯ ಗಾಯಕರೇ...

ಇತ್ತೀಚೆಗೆ ಮನೆಯ ಸದಸ್ಯರೆಲ್ಲ ತಮ್ಮ ಹೆಚ್ಚಿನ ಸಮಯವನ್ನು ಡಿಜಿಟಲ್ ಪರದೆಯಲ್ಲೇ ಕಳೆಯುತ್ತಾರೆಂದು ಡಿಸ್ಕವರಿ ಸೈನ್ಸ್ ಮೆಗಝೈನ್ ವರದಿ ಮಾಡಿದೆಯಂತೆ. ಅವರ ಪ್ರಕಾರ ಈ 'ಸ್ಕ್ರೀನ್ ಟೈಂ' ಎನ್ನುವುದು ಅಂಥಾ ಕ್ವಾಲಿಟಿ ಟೈಂ ಅಲ್ಲವಂತೆ. ಎಲ್ಲರಿಗೂ ಗೊತ್ತಿರುವ ವಿಷಯವನ್ನು ಅವರೇನು ಡಿಸ್ಕವರ್ ಮಾಡೋದು ಮಣ್ಣಾಂಗಟ್ಟಿ? ನಾವೀಗಾಗಲೇ ಏಳೆಂಟು ಗಂಟೆ ಈ ಪರದೆಯೊಳಗೆಯೇ ಕಳೆಯುತ್ತಿದ್ದೇವೆ. ಎಷ್ಟೆಲ್ಲ ಸಂಶೋಧನೆಗಳಾಗುತ್ತವೆ ಈ ಪ್ರಪಂಚದಲ್ಲಿ... ಆಗುವುದಾದರೆ ಇದಕ್ಕೊಂದು ಮದ್ದು ಕಂಡು ಹಿಡಿದು ಒಂದು ಸಂಶೋಧನಾ ಲೇಖನ ಪ್ರಕಟಿಸಲಿ... ಚೀನಾ ಬ್ಯಾಟ್, ಇಂಡಿಯಾದ ಆ್ಯಕ್ಟಿವ್ ಎಣ್ಣೆ, ನಮ್ಮ ಊರಿನ ಬೇವಿನೆಣ್ಣೆ, ಬೊಂಬಾಯಿಮೇಡ್

